# ಸ್ವ ಅಧ್ಯಯನವೇ ಯಶಸ್ಸಿನ ಸೂತ್ರ



ಮಂಗಳೂರಿನ ಕೆನರಾ ಕಾಲೇಜಿನ ದೀಪಶ್ರೀ ಎಸ್., ವಾಣಿಜ್ಯ ವಿಭಾಗದಲ್ಲಿ 600ಕ್ಕೆ 599 ಅಂಕಗಳನ್ನು ಗಳಿಸಿ ರಾಜ್ಯಕ್ಕೆ ಮೊದಲಿಗರಾಗಿದ್ದಾರೆ. ತಮ್ಮ ಸ್ವಂತ ಅಧ್ಯಯನದಿಂದ ಯಶಸ್ಸು ಸಿದ್ಧಿಸಿಕೊಂಡ ಬಗೆಯನ್ನು ಅವರು ಇಲ್ಲಿ ಹಂಚಿಕೊಂಡಿದ್ದಾರೆ.

■ ರಾಘವೇಂದ್ರ ಕೆ. ತೊಗರ್ಸಿ

**ಪಿಯುಸಿ ಫಲಿತಾಂಶ: ದೀಪಶ್ರೀ ಎಸ್ ಸಂದರ್ಶನ**

◆ **ನಿಮ್ಮ ಪರಿಚಯ ಹೇಳಿ?**

ಊರು ಮಂಗಳೂರು. ತಂದೆ ಅಶೋಕ್ ಎಚ್. ಸ್ವ ಉದ್ಯೋಗಿ. ಅಮ್ಮ ಸುಮಾ ಪಿ. ಗೃಹಿಣಿ. ಸಿಎ ಮಾಡಬೇಕು ಎನ್ನುವುದು ನನ್ನ ಕನಸು. ಹಾಗಾಗಿ ವಾಣಿಜ್ಯ ವಿಷಯ ಆಯ್ಕೆ ಮಾಡಿಕೊಂಡಿದ್ದೇನೆ.

◆ **ರಾಜ್ಯಕ್ಕೆ ಮೊದಲಿಗರಾಗುತ್ತೀರಿ ಅನ್ನುವ ವಿಶ್ವಾಸ ಇತ್ತೆ?**

ಒಳ್ಳೆಯ ಅಂಕಗಳು ಬರುತ್ತವೆ ಅಂದುಕೊಂಡಿದ್ದೆ. ಕನಿಷ್ಠ 590 ಅಂಕಗಳನ್ನು ಪಡೆಯುವ ವಿಶ್ವಾಸ ಇತ್ತು. ಆದರೆ ನಾನೇ ಮೊದಲ ರ‍್ಯಾಂಕ್ ಪಡೆದಿದ್ದೇನೆ. ಅದೃಷ್ಟ ಬೇಕು ಎನ್ನುತ್ತಾರಲ್ಲ, ಅದೆಲ್ಲ ನನಗೆ ಕೂಡಿಬಂದಿದೆ.

◆ **ಪರೀಕ್ಷಾ ಸಿದ್ಧತೆ ಹೇಗಿತ್ತು?**

ತರಗತಿಯಲ್ಲಿ ಗಮನ ಇಟ್ಟು ಪಾಠಗಳನ್ನು ಕೇಳುತ್ತಿದ್ದೆ. ಒಂದು ತರಗತಿಗೂ ಗೈರುಹಾಜರಾಗಿಲ್ಲ. ಏನಾದರೂ ಅನುಮಾನ ಕಾಡಿದರೆ ತರಗತಿಯಲ್ಲೇ ಪರಿಹರಿಸಿಕೊಳ್ಳುತ್ತಿದ್ದೆ. ನಮ್ಮ ಶಿಕ್ಷಕರಿಗೆ ನೇರವಾಗಿ ಪ್ರಶ್ನೆ ಮಾಡುತ್ತಿದ್ದೆ. ಕಾನ್ಸೆಪ್ಟ್‌ಗಳನ್ನು ಅರ್ಥ ಮಾಡಿಕೊಂಡು ಕಲಿಯುತ್ತಿದ್ದೆ. ಕಂಠಪಾಠ ಮಾಡುತ್ತಿರಲಿಲ್ಲ. ಇಂಪಾರ್ಟೆಂಟ್ ಅಂತ ಆಯ್ದ ಭಾಗವನ್ನು ಪರೀಕ್ಷೆ ದೃಷ್ಟಿಯಿಂದಷ್ಟೇ ಓದುವ ಅಭ್ಯಾಸ ಅನುಸರಿಸಲಿಲ್ಲ. ಸೂತ್ರ ಮತ್ತು ವ್ಯಾಖ್ಯಾನಗಳನ್ನು ಮಾತ್ರ ಪಠ್ಯದಲ್ಲಿ ಇದ್ದಂತೆಯೇ ಬರೆಯಬೇಕಿತ್ತು. ಅದನ್ನು ಬಿಟ್ಟು ವಿವರಣೆ, ವಿಶ್ಲೇಷಣೆಯನ್ನು ವಿಷಯಾಧಾರಿತವಾಗಿ ನನ್ನ ಭಾಷೆಯಲ್ಲೇ ನಿರೂಪಣೆ ಮಾಡುತ್ತಿದ್ದೆ. ನನಗೆ ಹೇಗೆ ಅರ್ಥ ಆಗಿರುತ್ತಿತ್ತೋ ಹಾಗೆಯೇ ಬರೆಯುತ್ತಿದ್ದೆ.

ಚಿಕ್ಕವಯಸ್ಸಿನಿಂದಲೂ ನನಗೆ ಗಣಿತ ಇಷ್ಟ ಮತ್ತು ಸುಲಭ. ಅದು ಬಿಡಿಸುವಾಗಲೇ ಅರ್ಥ ಆಗುತ್ತಿತ್ತು. ಸ್ಟ್ಯಾಟಿಸ್ಟಿಕ್ಸ್, ಅಕೌಂಟ್ಸ್ ಕೂಡ ಕಷ್ಟ ಆಗಲಿಲ್ಲ. ಬಿಸಿನೆಸ್ ಸ್ಟಡೀಸ್‌ಗೆ ಸಂಬಂಧಿಸಿದಂತೆ ನಾನೇ ಸ್ವಂತ ನೋಟ್ಸ್ ಮಾಡಿಕೊಂಡಿದ್ದೆ. ಅದರಿಂದ ಅನುಕೂಲ ಆಗಿದೆ. ಟೆಸ್ಟ್‌ಗಳಿಗೆ ಒಮ್ಮೆ ತಿರುವಿ ಹಾಕಿದರೆ ಸಾಕಾಗುತ್ತಿತ್ತು. ರಜೆಯಲ್ಲಿ ಮಾದರಿ ಪ್ರಶ್ನೆಪತ್ರಿಕೆಗಳನ್ನು ಬಿಡಿಸುತ್ತಿದ್ದೆ. ಪ್ರಶ್ನೆಪತ್ರಿಕೆಯನ್ನು ಬಿಡಿಸುತ್ತಾ ಪಠ್ಯವನ್ನು ಸಂಪೂರ್ಣ ಕವರ್ ಮಾಡುತ್ತಿದ್ದೆ. ಯಾವುದನ್ನೂ ಬಿಟ್ಟು ಓದುವ ರಿಸ್ಕ್ ತೆಗೆದುಕೊಳ್ಳಲಿಲ್ಲ. ಅಧ್ಯಾಪಕರು ಕೊಡುವ ಮಾರ್ಗದರ್ಶನವನ್ನು ಪಾಲಿಸಿದ್ದೇನೆ. ಓದಿಗಾಗಿ ವೇಳಾಪಟ್ಟಿ ಸಿದ್ಧ ಮಾಡಿಕೊಂಡಿರಲಿಲ್ಲ. ಸಮಯ ಸಿಕ್ಕಾಗ ಓದುತ್ತಿದ್ದೆ. ಅನುಮಾನ ಮತ್ತು ಗೊಂದಲ ಆಗುತ್ತಿದ್ದ ವಿಷಯಗಳನ್ನು ಹಾಗೆಯೇ ಬಿಡುತ್ತಿರಲಿಲ್ಲ. ತರಗತಿ ಮುಗಿಸಿಕೊಂಡು ಮನೆಗೆ ಬಂದ ನಂತರ ಹೋಮ್ ವರ್ಕ್ ಇರುತ್ತಿದ್ದವು. ಅದನ್ನು ಪೂರೈಸುವಷ್ಟರಲ್ಲಿ ಸಮಯ ಮುಗಿದಿರುತ್ತಿತ್ತು. ಕೆಲವೊಮ್ಮೆ ಓದಲು ಆಗುತ್ತಿರಲಿಲ್ಲ. ರಜೆ ದಿನಗಳಲ್ಲಿ ಓದಲು ಹೆಚ್ಚಿನ ಅವಕಾಶ ಸಿಗುತ್ತಿತ್ತು. ಆಗೆಲ್ಲ ರಾತ್ರಿ ಎರಡು ಮೂರು ಗಂಟೆ ತನಕ ಓದುತ್ತಿದ್ದೆ.

◆ **ಓದುವಾಗ ಬೇಸರ ಅನ್ನಿಸಿದರೆ ಏನು ಮಾಡ್ತಿದ್ರಿ?**

ಬೋರ್ ಅನ್ನಿಸಿದರೆ ವಾಕ್ ಮಾಡುತ್ತಿದ್ದೆ. ಆಮೇಲೆ ಸಂಗೀತಾಭ್ಯಾಸ ಮಾಡುತ್ತಿದ್ದೆ. ಹಾಡುವುದರಿಂದ ಗಮನ ಕೇಂದ್ರೀಕರಿಸಲು ಸಹಾಯ ಆಗುತ್ತಿತ್ತು. ನನ್ನ ದೃಷ್ಟಿಯಲ್ಲಿ ಓದಲು ಅದರಿಂದಲೂ ಅನುಕೂಲ ಆಗಿದೆ. ಗಮನಕೊಟ್ಟು ಓದುವುದರಿಂದ ಬೋರ್ ಅನ್ನಿಸುತ್ತಿರಲಿಲ್ಲ. ಹಗಲು ಹೊತ್ತು ಓದಿದಾಗ ಕೆಲವೊಮ್ಮೆ ಹಾಗೆ ಅನ್ನಿಸಿದ್ದೂ ಇದೆ. ಪುಸ್ತಕವನ್ನು ಆಸಕ್ತಿಯಿಂದ ಹಿಡಿದುಕೊಳ್ಳುತ್ತಿದ್ದೆ.

◆ **ಊಟ, ಪಾಠ, ಆಟವನ್ನು ನಿಭಾಯಿಸಿದ್ದು ಹೇಗೆ?**

ಪಿಯುಸಿಯಲ್ಲಿ ಆಟೋಟದಲ್ಲಿ ಭಾಗವಹಿಸುತ್ತಿರಲಿಲ್ಲ. ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ತರಗತಿಯೂ ಇರಲಿಲ್ಲ. ತರಗತಿಗಳು ಮುಗಿದ ನಂತರ ಆಸಕ್ತಿ ಇದ್ದವರು ಆಡುತ್ತಿದ್ದರು. ನಾನು ಹೋಗುತ್ತಿರಲಿಲ್ಲ. ಮನೆಗೂ ಬಸ್ ನಿಲ್ದಾಣಕ್ಕೂ ಸ್ವಲ್ಪ ದೂರ. ನಡೆದುಕೊಂಡು ಹೋಗುತ್ತಿದ್ದರಿಂದ ಅದೇ ಸಾಕಾಗುತ್ತಿತ್ತು. ಹೊರಗಿನ ತಿಂಡಿಗಳಿಗೆ ನಮ್ಮ ಪೋಷಕರು ಪ್ರೋತ್ಸಾಹಿಸುವುದಿಲ್ಲ. ಕಾಲೇಜಿಗೆ ಬುತ್ತಿ ತೆಗೆದುಕೊಂಡು ಹೋಗುತ್ತಿದ್ದೆ. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಕ್ಯಾಂಟೀನ್‌ನಲ್ಲಿ ತಿನ್ನುತ್ತಿದ್ದೆ. ಎರಡನೇ ವರ್ಷದ ಪಿಯುನಲ್ಲಿ ಸಿನಿಮಾ ನೋಡಲೂ ಆಗಲಿಲ್ಲ. ಮೊದಲ ವರ್ಷದ ರಜೆಯಲ್ಲಿ ಒಂದಿಷ್ಟು ಸಿನಿಮಾಗಳನ್ನು ನೋಡಿದ್ದೆ. ಸಿಎ ಕೋಚಿಂಗ್ ಇರುತ್ತಿದ್ದರಿಂದ ಸಮಯ ಸಿಗುತ್ತಿರಲಿಲ್ಲ.

◆ **ಕಿರಿಯರು ಹೆಚ್ಚು ಅಂಕ ಗಳಿಸಲು ಮಾರ್ಗದರ್ಶನ ಕೇಳಿದರೆ, ಏನು ಹೇಳುತ್ತೀರಿ?**

ಟ್ಯೂಷನ್‌ಗೆ ಹೋಗಬೇಕು ಎನ್ನುವುದು ನಿಯಮ ಇಲ್ಲ. ನಾನೂ ಹೋಗಿಲ್ಲ, ನನ್ನ ಅಭ್ಯಾಸ ಕ್ರಮವನ್ನೇ ತಿಳಿಸುತ್ತೇನೆ. ತರಗತಿಯಲ್ಲಿ ಏನು ಪಾಠ ಮಾಡುತ್ತಿದ್ದಾರೆ ಎನ್ನುವುದನ್ನು ಗಮನವಿಟ್ಟು ಕೇಳಬೇಕು. ಶಿಕ್ಷಕರ ಮಾರ್ಗದರ್ಶನ, ಸೂಚನೆಯನ್ನು ತಪ್ಪದೇ ಪಾಲಿಸಬೇಕು. 10ನೇ ತರಗತಿಯ ನಂತರ ನಿತ್ಯ ಧ್ಯಾನ ಮಾಡುತ್ತಿದ್ದೆ. ಒಳ್ಳೆಯ ಅಂಕ ಪಡೆಯಬೇಕು ಎಂದು ಪ್ರಾರ್ಥಿಸುತ್ತಿದ್ದೆ. ಅದು ನನ್ನ ಉದ್ದೇಶಕ್ಕೆ ಪೂರಕವಾಗಿ ಕೆಲಸ ಮಾಡಲು ಪ್ರೇರಣೆ ನೀಡುತ್ತಿತ್ತು. ಒತ್ತಡ ಹಾಕಿಕೊಳ್ಳದೆ ಶಾಂತ ಮನಸ್ಥಿತಿಯಿಂದ ಪರೀಕ್ಷೆ ಎದುರಿಸಬೇಕು.

ಪ್ರತಿಕ್ರಿಯಿಸಿ: feedback@sudha.co.in